ಈ. ಉದ್ಭವಿಸುವುದಿಲ್ಲ.

ಹೇಮಾವತಿ ನಾಲೆಯಿಂದ ಕುಡಿಯುವ ನೀರಿನ ಯೋಜನೆ.

1102 (1756): ಶ್ರೀ ಎಸ್. ರುದ್ರಪ್ಪ (ತುರುವೇಕೆರೆ):–

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ತುರುವೇಕೆರೆಗೆ ಹೇಮಾವತಿ ನಾಲೆಯಿಂದ ಕುಡಿಯುವ ನೀರಿನ ಯೋಜನೆ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2. ಬಂದಿದ್ದಲ್ಲಿ ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡಲಾಗುವುದು ? ಹಾಗೂ ಅದಕ್ಕಾಗಿ ಮಂಜೂರಾಗಿರುವ ಹಣವೆಷ್ಟು ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

1. ಇಲ್ಲಾ.

2. ಉದ್ಭವಿಸುವುದಿಲ್ಲ.

ಅಧ್ಯಕ್ಷರು:– ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮಂಡಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ.

ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಕಾಲರಾ ರೋಗದಿಂದ ಉದ್ಭವಿಸಿರುವ ಪರಿಸ್ಥಿತಿ

† ಶ್ರೀ ಕೆ. ಹರ್ಷಕುಮಾರಗೌಡ (ಚಾಮರಾಜ):– ಮಾನ್ಯ ಅಧ್ಯಕ್ಷರೇ, ಮೈಸೂರು ನಗರ ಈ ದಶಕದಲ್ಲೇ ಕಂಡಿರದಂತಹ ಅತ್ಯಂತ ಭೀಕರ ಕಾಲರಾ ಬೇನೆಯಿಂದ ತತ್ತರಿಸಿ ಹೋಗಿದೆ. ನಮ್ಮ ಜಿಲ್ಲೆಯ ಮಂತ್ರಿಗಳಾದ ರಾಜಶೇಖರಮೂರ್ತಿಯವರು ಮತ್ತು ಹಿರಿಯರಾದ ರಾಮಸ್ವಾಮಿಯವರ ಹತ್ತಿರ ಕೂಡ ನಾನು ಪ್ರಾರ್ಥನೆ ಮಾಡಿದ್ದೇನೆ ಸನ್ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಕೂಡ ಕೇಳಿದ್ದೇನೆ. ಈಗಾಗಲೇ ಜನವರಿ ತಿಂಗಳಿನಿಂದ ನಿನ್ನೆಯ ತನಕ ಸುಮಾರು 41 ಜನ ಕಾಲರಾ ಬೇನೆಗೆ ತುತ್ತಾಗಿ ನಿಧನರಾಗಿದ್ದಾರೆ. ಸೋಂಕು ರೋಗದ ಆಸ್ಪತ್ರೆಯ ಅಧ್ಯಕ್ಷ ಕೂಡ ನಾನು. ಮೈಸೂರು ನಗರದ ಇತಿಹಾಸದಲ್ಲೇ ಇಷ್ಟೊಂದು ಕಾಲರಾ ಬೇನೆಯಿಂದ ಸತ್ತಿರುವುದು ಈ ದಶಕದಲ್ಲಿ ಇದು ಅತ್ಯಂತ, ಕೇಳರಿಯದಂತಹ ದುರಾದೃಷ್ಟಕರವಾದಂತಹ ವಿಷಯ. ಇವತ್ತು ರಾತ್ರಿ ನಾನು ಟೆಲಿಫೋನ್ ಮುಖಾಂತರ ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡಿದೆ. ಇವತ್ತು ಮೈಸೂರು ನಗರಕ್ಕೆ ನಮ್ಮ ಮಂತ್ರಿಗಳನ್ನು ಕಳುಹಿಸಿಕೊಡಿ ಆರೋಗ್ಯ ಮಂತ್ರಿಗಳನ್ನು ಕಳುಹಿಸಿಕೊಡಿ ಎಂದು. ಅಲ್ಲಿ ಡಾಕ್ಟರ್ಸ್ ಇಲ್ಲ, ಅಲ್ಲಿ ನರ್ಸಗಳು ಇಲ್ಲ; ಸುಮಾರು 30 ಜನ ರೋಗಿಗಳಿಗೆ ಅವಕಾಶ ಇರುವಂತಹ ಒಂದು ಆಸ್ಪತ್ರೆಯಲ್ಲಿ ಇವತ್ತು 300 ಜನ ರೋಗಿಗಳು ದಾಖಲಾಗಿದ್ದಾರೆ. ಕೆ. ಆರ್. ಆಸ್ಪತ್ರೆಯಲ್ಲಿ ನಾವು ಡಾಕ್ಟರ್ಸನ್ನು ಕೇಳಿದ್ದೇವೆ. ನಗರ ಪಾಲಿಕೆಯಿಂದ ವ್ಯವಸ್ಥೆ ಮಾಡಿಕೊಡಬೇಕೆಂದು ಕೇಳಿದ್ದೇವೆ. ನಮ್ಮ ಡಿ.ಎಚ್.ಓ. ಹತ್ತಿರ ಕೇಳಿದ್ದೇವೆ. ಆದರೂ ಕೂಡ ನಿನ್ನೆಯ ತನಕ ಯಾವ ಕಾರ್ಯ ಕೂಡ ಸರಿಯಾಗಿ ಆಗಿಲ್ಲ. ಸುದೈವ ಜಿಲ್ಲಾಧಿಕಾರಿಗಳು 3 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದಾರೆ ನಿನ್ನೆ ಸಂಜೆ 7 ಗಂಟೆಯಲ್ಲಿಯೂ ಕೂಡ ಒಬ್ಬ ವ್ಯಕ್ತಿ ಮರಣ ಹೊಂದಿದ. ನಾನು ಆಗ ತಾನೇ ಟೆಲಿಫೋನ್ ಮೂಲಕ

ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡಿದೆ. ಇಲ್ಲಿ ತುರ್ತಾಗಿ ಆರೋಗ್ಯ ಮಂತ್ರಿಗಳು ಬರಬೇಕು ಮತ್ತು ಜಿಲ್ಲಾ ಮಂತ್ರಿಗಳು ಬರಬೇಕು. ಇಲ್ಲಿಯ ವ್ಯವಸ್ಥೆ ಪೂರ್ತಿ ಅವ್ಯವಸ್ಥೆ ಆಗಿದೆ. ಇಡೀ ನಗರ ಮತ್ತು ಜಿಲ್ಲೆಯ ಜನತೆ ಭಯದಿಂದ ಗಾಬರಿಯಿಂದ ಆತಂಕದಿಂದ ತತ್ತರಿಸಿ ಹೋಗಿದ್ದಾರೆ. ನನ್ನ ಕ್ಷೇತ್ರದಲ್ಲೂ ಕೂಡ ಜನ ಸಾವು ನೋವಿಗೆ ಈಡಾಗಿದ್ದಾರೆ. ಇವತ್ತಿನ ಮಾಹಿತಿ ಕೂಡ ನನಗೆ ದೊರಕುತ್ತಿಲ್ಲ. ಬೆಳಿಗ್ಗೆ ನೇರವಾಗಿ ಎದ್ದು ಮೈಸೂರಿನಿಂದ ಬಂದು ತಮ್ಮನ್ನು ಭೇಟಿ ಮಾಡಿದ್ದೇನೆ. ಈ ಶೂನ್ಯ ವೇಳೆಯಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ನಾನು ಕೇಳಿದಾಗ ತಾವು ಅದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕೆ ಧನ್ಯವಾದಗಳು. ಆದರೆ ಈ ಕೆಲಸ ಇವತ್ತು ಸಮರೋಪಾದಿಯಲ್ಲಿ ಆಗಬೇಕಾಗಿದೆ. ನಗರಪಾಲಿಕೆಯಲ್ಲಿ ಆರೋಗ್ಯಾಧಿಕಾರಿ ಇಲ್ಲ. ನಗರಪಾಲಿಕೆಯಿಂದ ಏನೊಂದು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕಾಗಿತ್ತು ಇಡೀ ನಗರ ಮತ್ತು ಜಿಲ್ಲೆಯಲ್ಲಿ ಆರೋಗ್ಯಾಧಿಕಾರಿಗಳು ಆದರಲ್ಲಿ ವಿಫಲರಾಗಿದ್ದಾರೆ. ಇದರ ಮುನ್ನೆಚ್ಚರಿಕೆ ಕ್ರಮ ಏನಾದರೂ ಆಗಿದ್ದರೆ ಆ ಕ್ರಮ ಕೈಗೊಂಡಿದ್ದ ಪಕ್ಷದಲ್ಲಿ ಇವತ್ತು 300 ಜನ ದಾಖಲಾಗುವಂತಹ ಪರಿಸ್ಥಿತಿ ಇರಲಿಲ್ಲ. ಅಲ್ಲಿನ ನೀರು ಕಂಟಾಮಿನೇಷನ್ ಆಗಿದೆ. ಸಾಮಾನ್ಯವಾಗಿ ಆರೋಗ್ಯಾಧಿಕಾರಿಗಳಿಗೆ ಈ ಮಾಹಿತಿ ಇರುತ್ತದೆ. ರಾಜ್ಯದ ಹೆಲ್ತ್ ಡೈರೆಕ್ಟರ್‌ಗೆ ಮಾಹಿತಿ ಇರುತ್ತದೆ. ಪ್ರತಿ ಫೆಬ್ರವರಿ ತಿಂಗಳಲ್ಲಿ ಎಲ್ಲಿ ಜನಸಂದಣಿ ಹೆಚ್ಚು ಇರುವ ಪ್ರದೇಶಗಳಲ್ಲಿ ನೀರಿಗೆ ವ್ಯವಸ್ಥೆ ಮಾಡಬೇಕಾದರೆ ಕ್ಲೊರಿನೇಷನ್ ಜಾಸ್ತಿ ಮಾಡಬೇಕು. ಆ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು. ಅದನ್ನು ತೆಗೆದುಕೊಳ್ಳಲಿಲ್ಲ. ಮೈಸೂರು ನಗರಪಾಲಿಕೆ ಏನು ಬಿಸಿ ನೀರು ಕೊಡಬೇಕು, ಜನ ಬಿಸಿ ನೀರು ಕುಡಿಯಬೇಕು ಎಂದು ಏನು ಎಚ್ಚರಿಕೆ ಕೊಡಬೇಕಾಗಿತ್ತು, ಪ್ರಚಾರ ಕೊಡಬೇಕಾಗಿತ್ತು ಇಂತಹ ಸಮಯದಲ್ಲಿ ಅದೂ ಆಗಿಲ್ಲ. ಹೋಟೆಲ್‌ಗಳಲ್ಲಿ ಬಿಸಿ ನೀರು ಕೊಡಬೇಕು. ಅದೂ ಆಗಿಲ್ಲ. ಬೀದಿಯಲ್ಲಿ ಮಾರಾಟ ಮಾಡುವಂತಹ ಆಹಾರ ಪದಾರ್ಥಗಳನ್ನು ನಿಷೇಧ ಮಾಡಬೇಕಾಗಿತ್ತು ಮತ್ತು ಶಾಲೆಗಳ ಪಕ್ಕದಲ್ಲಿ ಏನು ಆಹಾರ ಪದಾರ್ಥಗಳನ್ನು ಮಾರುತ್ತಾರೆ ಮಕ್ಕಳಿಗೆ ಅದನ್ನು ನಿಷೇಧ ಮಾಡಬೇಕಾಗಿತ್ತು. ಅದು ಯಾವುದೂ ಕೆಲಸ ಆಗದೆ ಇರುವುದರಿಂದ ಇವತ್ತು ಸುಮಾರು 300 ಜನ ಆಸ್ಪತ್ರೆಗೆ ದಾಖಲಾಗಿದ್ದಾರೆ. ನಾಳೆಯ ವೇಳೆಗೆ ಎಷ್ಟು ಜನ ಸಾಯುತ್ತಾರೋ ಗೊತ್ತಿಲ್ಲ, ಇವತ್ತು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಈ ರಾಜ್ಯದ ಹೆಲ್ತ್ ಡೈರೆಕ್ಟರ್ ಯಾರಿದ್ದಾರೆ ಅವರನ್ನು ಸಸ್ಪೆಂಡ್ ಮಾಡಬೇಕು ತುರ್ತಾಗಿ ಅಂತ ನಾನು ಒತ್ತಾಯ ಮಾಡುತ್ತೇನೆ. ಇದು ಅವರ ಪಿಳಲತೆ. ಇವತ್ತು ನನ್ನ ಕ್ಷೇತ್ರ ಮತ್ತು ಅಜೀಜ್‌ಸೇಠ್‌ರ ಕ್ಷೇತ್ರ. ನಮ್ಮ ಸೋಮಸುಂದರರ ಕ್ಷೇತ್ರ ನಮ್ಮ ಮೂರು ಜನರ ಕ್ಷೇತ್ರಗಳಲ್ಲಿದೆ. ನಮ್ಮ ಮೈಸೂರು ನಗರದಲ್ಲಿ ತಲೆ ಎತ್ತಿ ತಿರುಗಾಡಲಿಕ್ಕೆ ಆಗುತ್ತಿಲ್ಲ ಅಂತಹ ಪರಿಸ್ಥಿತಿ ಇದೆ. ಸದನ ನಡೆಯುತ್ತಿದೆ, ಸುದ್ದಿ ಮಾಧ್ಯಮಗಳಿಂದ ವಿಷಯ ಬಂದಾಗ ಮೈಸೂರು ನಗರಕ್ಕೆ ನೇರವಾಗಿ ಹೋಗಿದ್ದೇವೆ. ಅಲ್ಲಿ ಮುಖ ತೋರಿಸುವುದಕ್ಕೆ ಆಗುತ್ತಿಲ್ಲ. ನಮ್ಮನ್ನು ಘೇರಾವೋ ಮಾಡುವಂತಹ ಪರಿಸ್ಥಿತಿ ಆಗುತ್ತಿದೆ. ಇದರಿಂದ ನಾನು ತಮ್ಮಲ್ಲಿ ಒತ್ತಾಯ ಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ತುರ್ತಾಗಿ ರಾಜ್ಯ ಸರ್ಕಾರ ಈ ಒಂದು ಸಮಸ್ಯೆಯನ್ನು ಹೇಗೆ ಬಗೆಹರಿಸಬೇಕು. ತಕ್ಷಣ ಡಾಕ್ಟರ್ಸ್ ತಂಡಗಳನ್ನು ಕಳುಹಿಸಿಕೊಡಬೇಕು. ಔಷಧಿಗಳನ್ನು ಕಳುಹಿಸಿಕೊಡಬೇಕು. ಆಸ್ಪತ್ರೆಯ ವಾರ್ಡಿನಲ್ಲಿ ಟೆಂಟ್ ಹಾಕಿಸುವ ಮೂಲಕ ಹೊಸದಾಗಿ ವಾರ್ಡಿನ ವ್ಯವಸ್ಥೆ ಆಗಬೇಕು. ಹೆಚ್ಚಿಗೆ ಬೆಡ್ಸ್ ಹಾಕುವಂತಹ ಒಂದು ವ್ಯವಸ್ಥೆ ಆಗಬೇಕೆಂದು ನಾನು ಒತ್ತಾಯ ಮಾಡುತ್ತಾ ಇವತ್ತು ನಮ್ಮ ಜಿಲ್ಲೆಯ ಮಂತ್ರಿಗಳಾದ ರಾಜಶೇಖರಮೂರ್ತಿಗಳು ಆರೋಗ್ಯ ಸಚಿವರು ಕೂಡ ಇಲ್ಲೇ ಇದ್ದಾರೆಂದು ನಾನು ಭಾವಿಸುತ್ತೇನೆ. ಜೊತೆಗೆ ಕಾರ್ಯದರ್ಶಿಗಳು ಬಂದಿದ್ದಾರೆ. ತತ್ಕ್ಷಣ ಯಾರು ಈ ರಾಜ್ಯದ ಆರೋಗ್ಯದ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಾರೆ, ಆ ನಿರ್ದೇಶಕರ ಜವಾಬ್ದಾರಿಯನ್ನು ನಾನು ಖಂಡಿಸುತ್ತಾ ಈ ಸಂದರ್ಭದಲ್ಲಿ ಅವರನ್ನು ತಕ್ಷಣ ಸಸ್ಪೆಂಡ್ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಾ ತುರ್ತು ಕ್ರಮದ ಆದೇಶ ಸರ್ಕಾರ ಏನು ಕ್ರಮ

ತೆಗೆದುಕೊಳ್ಳುತ್ತದೆಂದು ನಾನು ತಮ್ಮ ಮೂಲಕ ಈ ಸದನದಲ್ಲಿ ಕೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ ಅಧ್ಯಕ್ಷರೇ.

† ಶ್ರೀ ಕೆ. ಎಂ. ಸೋಮಸುಂದರಂ (ಕೃಷ್ಣರಾಜ):– ಮಾನ್ಯ ಅಧ್ಯಕ್ಷರೇ, ಈ ಘೋರ ದುರಂತ ನಾನು ಕಂಡರಿಯೇ. 30–40 ವರ್ಷಗಳ ಅನುಭವ ನನಗೆ ಇದೆ. ಈ ದುರಂತ ಮೈಸೂರು ನಗರದಲ್ಲಿ ಇದೇ ಪ್ರಥಮ. 41 ಜನ ಸತ್ತಿರಬೇಕು ಅಂದರೆ ಮೈಸೂರು ನಗರ ಅಂದಚೆಂದವ ನಗರ. ಚೊಕ್ಕವಾದ ನಗರ ಹಸನಾದ ನಗರ, ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಭಾರತದಲ್ಲಿ ಪ್ರಥಮವಾಗಿ ಬಂದಿರತಕ್ಕಂಥ ನಗರ. ಈ ದಿಸೆಯಲ್ಲಿ ಈ ನೀರಿನ ಸರಬರಾಜಿನಲ್ಲಿ ಒಳಚರಂಡಿ ಮತ್ತು ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಅವರಿಗೆ ವಹಿಸಿದ ಮೇಲೆ ಅನೇಕ ತೊಂದರೆಗಳು ನಮಗೆ ಆಗುತ್ತಿವೆ. ಮೈಸೂರಿನಲ್ಲಿ 8 ಲಕ್ಷ ಪ್ರಜಾ ಸಂಖ್ಯೆ ಇದೆ. ಮೈಸೂರು ನಗರದಲ್ಲಿ ಸುಮಾರು 22 ಜನ ಕಾಲವಾದರು.

ಈ ವಾಂತಿ ಭೇದಿ ರೋಗದಿಂದ ಅಂದರೆ, ನಾವುಗಳು ನಾಚಿಕೆ ಪಡಬೇಕಾಗುತ್ತದೆ. ಇವೊತ್ತಿನ ದಿವಸ ಆಸ್ಪತ್ರೆಯಲ್ಲಿ ಸಲೈನ್ ಕೂಡ ಇಲ್ಲ, ಅದರ ಜೊತೆಗೆ ಅಲ್ಲಿರತಕ್ಕಂಥವರು ಇಬ್ಬರು ಡಾಕ್ಟರ್ಸ್ ಮತ್ತು ಮೂವರು ನರ್ಸ್‌ಗಳು. ಇವರು 300 ಜನ ರೋಗಿಗಳನ್ನು ನೋಡಿಕೊಳ್ಳಲು ಸಾಧ್ಯವೇ ? ಇಲ್ಲಿ ಎಳನೀರಿನ ಅವಶ್ಯಕತೆಯು ಬೇಕಾದಷ್ಟು ಇದೆ. ಮೈಸೂರು ನಗರ ಸಭೆಯವರದ್ದು 4 ಸಾವಿರ ತೆಂಗಿನ ಮರಗಳು ಇವೆ. ಇಂಥ ಪರಿಸ್ಥಿತಿಯಲ್ಲಿ ಅವರು ಎಳನೀರು ಸಪ್ಲೈ ಮಾಡಲು ಕೂಡ ಮುಂದೆ ಬಂದಿಲ್ಲ. ಇಂಥ ಒಂದು ಪರಿಸ್ಥಿತಿಯನ್ನು ಎದುರಿಸುವಲ್ಲಿ ನಮ್ಮ ಆರೋಗ್ಯ ಇಲಾಖೆಯು ಸಂಪೂರ್ಣ ವಿಫಲತೆಯನ್ನು ಹೊಂದಿದೆ. ಕಾರ್ಪೋರೇಷನ್‌ನಲ್ಲಿರತಕ್ಕಂಥ ಆರೋಗ್ಯ ಅಧಿಕಾರಿಗಳು ಜಿಲ್ಲೆಯಲ್ಲಿರತಕ್ಕಂಥ ಆರೋಗ್ಯ ಅಧಿಕಾರಿಗಳು, ಹಾಗೂ ಇನ್ನಿತರ ಡಾಕ್ಟರ್‌ಗಳು ಜೊತೆಗೂಡಿ ಇದನ್ನು ಎದುರಿಸಿದ್ದರೆ ಇದನ್ನು ತಡೆಯಬೇಕಾಗಿತ್ತು. ಇನ್ನಾದರೂ ಎಲ್ಲರೂ ಜೊತೆಗೂಡಿ ಈ ವಿಕೋಪವನ್ನು ಎದುರಿಸಬೇಕಾಗುತ್ತದೆ, ನಾನು ಒಂದು ಸಲಹೆಯನ್ನು ಕೊಡಬಯಸುತ್ತೇನೆ. ಅಲ್ಲಿ ಔಷಧಿಗಳು ಸರಿಯಾಗಿ ಇಲ್ಲ. ಇನ್ಯಾಕ್ಯುಲೇಷನನ್ನು ನಗರದಲ್ಲಿ ಎಲ್ಲರಿಗೂ ಕೊಟ್ಟರೆ ಅದು ಹಬ್ಬುದ ರೀತಿಯಲ್ಲಿ ತಡೆಗಟ್ಟಬಹುದು. ಈ ಬಗ್ಗೆ ಕೂಡಲೇ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):– ಮಾನ್ಯ ಅಧ್ಯಕ್ಷರೇ, ಮೈಸೂರು ನಗರದಲ್ಲಿ ಕಳೆದ ಹತ್ತಾರು ವರ್ಷಗಳಿಂದ ಕಾಲರಾ ಬರತಕ್ಕಂಥ ಒಂದು ವ್ಯವಸ್ಥೆ ಇದೆ. ಆದರೆ ಈ ರೋಗವು ಅಧಿಕಾರಿಗಳ ಬೇಜವಾಬ್ದಾರಿತನದಿಂದ ವ್ಯಪಸ್ಥಿತವಾಗಿ ಬರುತ್ತಾ ಇದೆ. ಮೈಸೂರು ನಗರವು ಬೃಹದಾಕಾರವಾಗಿ ಬೆಳೆಯುತ್ತಾ ಇದೆ. ಈಗ ಮೈಸೂರು ನಗರದಿಂದ ಇಡೀ ತಾಲ್ಲೂಕಿನ ವ್ಯಾಪ್ತಿಗೆ ಹಬ್ಬುತ್ತಾ ಇದೆ. ಇದು ಶುರುವಾಗಿ ಸುಮಾರು 45 ದಿನಗಳು ಕಳೆಯುತ್ತಾ ಬಂತು. ಇದನ್ನು ತಡೆಗಟ್ಟುವಲ್ಲಿ ಅಲ್ಲಿರತಕ್ಕಂಥ ಆರೋಗ್ಯ ಇಲಾಖೆಯು ಪರಿಪೂರ್ಣವಾಗಿ ಕೆಲಸವನ್ನು ಮಾಡಿಲ್ಲ. ಅಲ್ಲಿರತಕ್ಕಂಥ ಆಸ್ಪತ್ರೆಗಳಲ್ಲಿ ರೋಗಿಗಳು ಹೋದರೆ ಅವರನ್ನು ಸರಿಯಾಗಿ ನೋಡಿಕೊಳ್ಳುತ್ತಾ ಇಲ್ಲ. ಹೀಗಾಗಿ ಬಹಳ ಗಂಭೀರವಾದಂಥ ಪರಿಸ್ಥಿತಿಯು ಉಲ್ಬಣವಾಗಿದೆ. ಇದನ್ನು ತಡೆಗಟ್ಟುವ ವಿಚಾರದಲ್ಲಿ ಇಮವರೆಗೂ ಸರ್ಕಾರದವರು ಗಂಭೀರವಾದ ಕ್ರಮಗಳನ್ನು ತೆಗೆದುಕೊಂಡಿಲ್ಲ. ಹೀಗೆಯೇ ಇದ್ದರೆ ಇನ್ನೊಂದು ತಿಂಗಳಲ್ಲಿ ಈ ಸೋಂಕು ರೋಗಕ್ಕೆ ಬಲಿಯಾಗಿ ಸಾವಿರಾರು ಜನರು ಸಾಯುವಂಥ ಪರಿಸ್ಥಿತಿಯು ಬರುತ್ತದೆ. ಇದರ ಬಗ್ಗೆ ಸರ್ಕಾರದವರು ಕ್ರಮಗಳನ್ನು ಯಾವ ರೀತಿಯಲ್ಲಿ ಕೈಗೊಂಡಿದ್ದಾರೆ ಮತ್ತು ತಡೆಗಟ್ಟಲು ತೆಗೆದುಕೊಂಡ ಕ್ರಮಗಳು ಏನು ಎಂಬ ಬಗ್ಗೆ ಸರ್ಕಾರದವರು ಒಂದು ಹೇಳಿಕೆಯನ್ನು ಕೊಡಬೇಕು. ಇದರ ಜೊತೆಗೆ ಸೂಕ್ತ ಮತ್ತು ಸಕಾಲಿಕ ವ್ಯವಸ್ಥೆಯನ್ನು ಕೂಡ ಮಾಡಬೇಕು. ಅಲ್ಲಿರತಕ್ಕಂಥ ಮಹಾನಗರ ಪಾಲಿಕೆಗೆ ಯಾವ ರೀತಿಯ ಸಹಕಾರವನ್ನು ಕೊಡಬೇಕು, ಆಸ್ಪತ್ರೆಗಳಿಗೆ ಯಾವ ರೀತಿಯ ಔಷಧಿಗಳನ್ನು ಒದಗಿಸಬೇಕು, ಅದೇ ರೀತಿಯಲ್ಲಿ ಹಳ್ಳಿಗಳಿಗೆ ರೋಗ

ಹಬ್ಬದಂತೆ ಯಾವ ರೀತಿಯ ವ್ಯವಸ್ಥೆಯನ್ನು ಮಾಡಬೇಕು, ಇದನ್ನು ಮಾಡಲಿಲ್ಲ ಅಂದರೆ ಬಹಳ ಕೆಟ್ಟ ಪರಿಸ್ಥಿತಿಯು ಈ ರೋಗದ ಕಾರಣದಿಂದ ಉಂಟಾಗುತ್ತದೆ. ಈ ಬಗ್ಗೆ ಸೂಕ್ತ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರದವರಿಗೆ ಹೇಳುತ್ತೇನೆ.

† ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನ ಕೋಟೆ):– ಮಾನ್ಯ ಅಧ್ಯಕ್ಷರೇ, ಕಳೆದ 15 ದಿವಸಗಳ ಹಿಂದೆ ಮಳೆಯು ಜೋರಾಗಿ ಆ ಪ್ರದೇಶಗಳಲ್ಲಿ ಬಿದ್ದಿದೆ. ಮಳೆ ಬಿದ್ದ ಮೇಲೆ ಕಾಲರಾ ರೋಗ ಬರಬಹುದೆಂದು ನಗರ ಪಾಲಿಕೆಯವರು ಮುಂಜಾಗ್ರತೆಯನ್ನು ವಹಿಸಬೇಕಾಗಿತ್ತು. 15 ದಿವಸಗಳ ಕೆಳಗೆ ಸುಮಾರು 8 ಜನರು ಸತ್ತಿದ್ದಾರೆ. ಇಂಥ ಸಂದರ್ಭದಲ್ಲಿ ನಗರ ಪಾಲಿಕೆಯವರು ಚುಚ್ಚುಮದ್ದು ಕೊಡುವ ಬಗ್ಗೆ ಪ್ರಕಟಣೆ ಮಾಡಬೇಕಾಗಿತ್ತು. ಇಂಥ ಆಸ್ಪತ್ರೆಗಳಲ್ಲಿ ಚುಚ್ಚು ಮದ್ದು ತೆಗೆದುಕೊಳ್ಳಬೇಕೆಂಬ ಬಗ್ಗೆ ನಿರ್ದೇಶನ ನೀಡಬೇಕು. ಬಿಸಿನೀರು ಕುಡಿಯುವ ಬಗ್ಗೆ ಸಾರ್ವಜನಿಕರಿಗೆ ತಿಳಿಸಬೇಕು; ಹೋಟೆಲ್‌ಗಳಲ್ಲಿ ಬಿಸಿ ನೀರು ಕೊಡುವ ಬಗ್ಗೆ ಆದೇಶವನ್ನು ಕೊಡಬೇಕಾಗಿತ್ತು. ಆಸ್ಪತ್ರೆಗಳಲ್ಲಿ ಡಾಕ್ಟರ್ಸ್ ಇಲ್ಲದೆ, ಔಷಧಿಗಳು ಇಲ್ಲದೆ ಈ ಒಂದು ಚಿಕಿತ್ಸೆ ನೀಡಲು ಆಗುತ್ತಾ ಇಲ್ಲ. ಮೈಸೂರಿನಲ್ಲಿ ಸುಮಾರು 40 ಜನರು ಸತ್ತಿದ್ದಾರೆ. ನಗರ ಪಾಲಿಕೆಯವರು ಸರಿಯಾಗಿ ಕರ್ತವ್ಯ ನಿರ್ವಹಣೆ ಮಾಡಿಲ್ಲ. ಕೆ.ಆರ್. ಆಸ್ಪತ್ರೆಗೆ ಡಾಕ್ಟರ್‌ಗಳನ್ನು ಡೆಪ್ಯುಟೇಷನ್ ಕೊಡಿ ಎಂದು ಡಿಸ್ಟ್ರಿಕ್ಟ್ ಸರ್ಜನ್ ಬರೆಯುತ್ತಾರೆ. ಆಲ್ಲಿಯ ಡಾಕ್ಟರ್‌ಗಳು ಬರುವುದಿಲ್ಲ. ಡೈರೆಕ್ಟರ್‌ರವರು ಕೂಡ ಆಲ್ಲಿಗೆ ಹೋಗಿ ನೋಡಿಲ್ಲ. ನಗರಪಾಲಿಕೆಯ ಆರೋಗ್ಯಾಧಿಕಾರಿಯನ್ನು ವರ್ಗಾವಣೆ ಮಾಡಿದ್ದಾರೆ. ಆಲ್ಲಿರತಕ್ಕಂಥ ಇನ್ಸ್‌ಪೆಕ್ಟರ್ಸ್ 15 ವರ್ಷಗಳಿಂದಲೂ ಇದ್ದಾರೆ. ನಮ್ಮನ್ನೂ ವರ್ಗಾವಣೆ ಮಾಡಿಯಾರು ಎಂಬ ಚಿಂತೆಯಲ್ಲಿ ಸಾರ್ವಜನಿಕರಿಗೆ ಔಷಧಿ ಕೊಡುವುದು, ಪ್ರಕಟಣೆ ಮಾಡುವುದು ಇತ್ಯಾದಿ ಮಾಡಲು ಅಧಿಕಾರಿಗಳೇ ಇಲ್ಲ. ನಿರ್ದೇಶಕರು ಇವೊತ್ತು ಸದನದಲ್ಲಿ ಪ್ರಸ್ತಾಪವಾಗುತ್ತದೆಂದು ಗೊತ್ತಾದ ಮೇಲೆ ಇವೊತ್ತು ಮೈಸೂರಿಗೆ ಹೋಗಿದ್ದಾರೆ. ಹೆಚ್ಚು ಜನ ರೋಗಿಗಳು ಬಂದರೆ, ಆಲ್ಲಿ ಆಸ್ಪತ್ರೆಯಲ್ಲಿ ಜಾಗವೇ ಇಲ್ಲ. ಯಾವುದಾದರೂ ಮನೆಯನ್ನು ಬಾಡಿಗೆಗೆ ತೆಗೆದುಕೊಳ್ಳಬೇಕಾಗುತ್ತದೆ. ಸುಮಾರು 40 ವರ್ಷಗಳ ಹಿಂದಿನ ಈ ಆಸ್ಪತ್ರೆಯಲ್ಲಿ 20 ಕೊಠಡಿಗಳು ಇವೆ. ಆದ್ದರಿಂದ ತ್ವರಿತ ಕ್ರಮಗಳನ್ನು ಕೈಗೊಳ್ಳಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

† ಶ್ರೀ ಜೈಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು):– "ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಕಾಲರಾವು ವರ್ಷ ವರ್ಷವೂ ಮರುಕಳಿಸುವ ಪ್ರದೇಶವಾಗಿರುತ್ತದೆ. ಈ ವರ್ಷವೂ ಈ ಪ್ರದೇಶದಲ್ಲಿ ಕರುಳು ಬೇನೆಯು ಕಾಲರಾವು ಕಾಣಿಸಿಕೊಳ್ಳುತ್ತಿದೆ. ಇದು ಮೂಲತಃ ಆಶುದ್ಧ ನೀರನ್ನು ಕುಡಿಯುವುದರಿಂದ ಕಾಣಿಸಿಕೊಳ್ಳುವಂಥ ಕಾಯಿಲೆಯಾಗಿದೆ. ಮೈಸೂರು ಜಿಲ್ಲೆಯಲ್ಲಿ ಫೆಬ್ರುವರಿ 1993ರ ಮಧ್ಯದಿಂದ ಈವರೆಗೆ 69 ಹಳ್ಳಿಗಳಲ್ಲಿ 268 ಜನರಿಗೆ ಸಾಂಕ್ರಾಮಿಕ ಕರುಳು ಬೇನೆಯಾಗಿ 13 ಜನರು ಮೃತಪಟ್ಟಿರುವುದಾಗಿ ವರದಿಯಾಗಿದೆ. ಹಾಗೂ ಒಂದು ಹಳ್ಳಿಯಲ್ಲಿ ಇಬ್ಬರು ಕಾಲರ ಪೀಡಿತರಾಗಿರುವುದು ವರದಿಯಾಗಿದೆ. 20 ನೇ ಫೆಬ್ರವರಿ 1993ರಲ್ಲಿ ಮೈಸೂರು ನಗರದಲ್ಲಿ 559 ಜನರು ಸಾಂಕ್ರಾಮಿಕ ಕರುಳು ಬೇನೆ ಪೀಡಿತರಾಗಿ 19 ಜನರು ಮೃತಪಟ್ಟಿರುವುದಾಗಿ ವರದಿಯಾಗಿದೆ. ಈ ದಿವಸದ ವರದಿಯಂತೆ 75 ಜನರು ಮೈಸೂರಿನ ಸಾಂಕ್ರಾಮಿಕ ರೋಗದ ಆಸ್ಪತ್ರೆಯಲ್ಲಿ ದಾಖಲಾಗಿದ್ದು ಅಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಆಸ್ಪತ್ರೆಗೆ ಮತ್ತು ಮೈಸೂರು ಜಿಲ್ಲೆಗೆ ಕೆಳಕಂಡಂತೆ ಔಷಧಿಗಳನ್ನು ಸರಬರಾಜು ಮಾಡಲಾಗಿದೆ. ಟೆಟ್ರಾಸೈಕ್ಲಿನ್ – 35 ಸಾವಿರ, ಬೆಟ್ ಮೆಟಾಲಜಿನ್ ಇಂಜೆಕ್ಷನ್ಸ್ – 200, ರಿಂಗಲ್ ಲೆಕ್ಟರ್ಸ್ 100 ಬಾಟಲ್ಸ್, ಮೆಟ್ರೋನಿಡಲ್ ಜೋಲ್ 100 ಬೈಲ್, ಮೆಟ್ರೋನಿಡಲ್ ಜೋಲ್ ಟ್ಯಾಬ್ಲೆಟ್ಸ್ 10 ಸಾವಿರ, ಸಲಾಯಿನ್ ಬಾಟಲ್ಸ್ 5 ಸಾವಿರ, ಟೆಟ್ರೊಸೈಕ್ಲಿನ್ ನಾರ್ಮಲ್ ಸಲಾಯಿನ್ 5 ಸಾವಿರ, ಪಮಿಜಪೈಟ್ಸ್ 500 ಈವರೆಗೆ 11059 ಜನರಿಗೆ ಕಾಲರಾ ಪ್ರತಿರೋಧಕ ಚುಚ್ಚುಮದ್ದುಗಳನ್ನು ಹಳ್ಳಿ ಪ್ರದೇಶದಲ್ಲಿ, ನಗರ ಪ್ರದೇಶಗಳಲ್ಲಿ 20000 ಚುಚ್ಚು

ಮುದ್ದುಗಳನ್ನು ಕೊಡಲಾಗಿದೆ. ಹಾಗೂ ಬೇಕಾಗುವಷ್ಟು ಚುಚ್ಚುಮದ್ದುಗಳನ್ನು ಕೊಡಲು ವ್ಯವಸ್ಥೆ ಮಾಡಲಾಗಿದ್ದು ಕಾಲರಾ ಹರಡುವುದನ್ನು ತಡೆಗಟ್ಟಲು ಹೋಟೆಲ್‌ಗಳನ್ನು ಮುಚ್ಚಿಲು, ತೆರೆದಿಟ್ಟ ತಿಂಡಿ, ಹಣ್ಣು ಹಂಪಲುಗಳನ್ನು ರಸ್ತೆಯಲ್ಲಿ ಮಾರಾಟ ಮಾಡದಂತೆ ಮತ್ತು ನೊಣಗಳು ಹರಡದಂತೆ ಕ್ರಮ ಕೈಗೊಳ್ಳುವಂತೆ ಕ್ಲೋರಿನೇಟ್ ಮುಂತಾದ ಕ್ರಮಗಳನ್ನು ಯುದ್ಧೋಪಾದಿಯಲ್ಲಿ ಮಾಡಲಾಗುತ್ತಿದೆ. ಮೈಸೂರು ನಗರದಲ್ಲಿ ಮತ್ತು ಹಳ್ಳಿಗಾಡು ಪ್ರದೇಶಗಳಲ್ಲಿ ಕಾಲರಾ ಪೀಡಿತ ಪ್ರದೇಶಗಳಿಗೆ ಮೆಡಿಕಲ್ ಮತ್ತು ಪ್ಯಾರಾ ಮೆಡಿಕಲ್ ಸಿಬ್ಬಂದಿಯನ್ನು ಕಳುಹಿಸಲಾಗಿದೆ. ಕರುಳು ಬೇನೆ ಮತ್ತು ಕಾಲರಾವನ್ನು ತಡೆಗಟ್ಟಲು ಸಂಪೂರ್ಣ ನಿಯಂತ್ರಣ ಮಾಡಲು ಸರ್ಕಾರವು ತನ್ನ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ಒಬ್ಬ ಜಂಟಿ ನಿರ್ದೇಶಕರು ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನಿರ್ದೇಶಕರನ್ನು ಮೈಸೂರಿಗೆ ಕಳುಹಿಸಿ ರೋಗವನ್ನು ತಹಬಂದಿಗೆ ತರುವ ಪ್ರಯತ್ನ ಮಾಡಲಾಗುತ್ತಿದೆ. ಇವರಿಂದ ಹೆಚ್ಚಿನ ಪರಿಯನ್ನು ನಿರೀಕ್ಷಿಸಲಾಗುತ್ತಿದೆ."

ಶ್ರೀ ಪಾಟಾಳ್ ನಾಗರಾಜ್:– ಅಧ್ಯಕ್ಷರೇ, ಈ ಹೇಳಿಕೆಯಿಂದ ನನಗೂ ತೃಪ್ತಿಯಾಗುವುದಿಲ್ಲ. ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು. ಇದಕ್ಕಾಗಿ ಸರ್ಕಾರದ ಬೇಜವಾಬ್ದಾರಿತನವನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತೇನೆ. ಅಲ್ಲಿ ಪರಿಸ್ಥಿತಿಯು ಗಂಭೀರವಾಗಿದೆ. 10 ಲಕ್ಷ ಜನಸಂಖ್ಯೆ ಅಲ್ಲಿದ್ದು ಪ್ರವಾಸಿಗರು ಬೇರೆ ಬರುತ್ತಿರುತ್ತಾರೆ.

5.15 ಪಿ.ಎಂ.

ಬೇಜವಾಬ್ದಾರಿಯಿಂದ ಸರ್ಕಾರ ನಡೆದುಕೊಂಡಿದೆ. ಅಲ್ಲಿ ಸರಿಯಾದ ವ್ಯವಸ್ಥೆಯನ್ನು ಮಾಡಿಲ್ಲ. ಅತ್ಯಂತ ನೋವಿನಿಂದ ನಾನು ವಿರೋಧ ಮಾಡಬೇಕಾಗಿದೆ. ಸರ್ಕಾರದ ನೀತಿ ಸರಿಯಲ್ಲ.

(ಮಾನ್ಯ ಸದಸ್ಯರಾದ ಶ್ರೀ ಪಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಕೆ. ಹರ್ಷಕುಮಾರ್ ಗೌಡ:– ಮಾನ್ಯ ಮಂತ್ರಿಗಳು ಅಸಮರ್ಪಕವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ಈಗಾಗಲೇ ನಾನು ತಮ್ಮ ಮೂಲಕ ಮಾನ್ಯ ಮಂತ್ರಿಯವರಿಗೆ ಒತ್ತಾಯ ಮಾಡಿದ್ದೇನೆ. ನಮ್ಮ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು.

ಅಧ್ಯಕ್ಷರು:– ಅರ್ಥ ಮಾಡಿಕೊಂಡೇ ನಾನು ತಮಗೆ ಕಾಲಾವಕಾಶವನ್ನು ಮಾಡಿಕೊಟ್ಟಿದ್ದೇನೆ.

ಶ್ರೀ ಕೆ. ಹರ್ಷಕುಮಾರ್ ಗೌಡ:– 30 ಬೆಡ್‌ನ ಆಸ್ಪತ್ರೆಯಲ್ಲಿ 300 ಜನ ಬಂದಿದ್ದಾರೆ. ಬೆಡ್‌ಗಳ ಬಗ್ಗೆ ಹೇಳಿಲ್ಲ. ಡಾಕ್ಟರ್ ಕೊರತೆ ಇದೆ ಎಂದು ಹೇಳಿದ್ದೇನೆ, ಡಾಕ್ಟರ್‌ಗಳ ಬಗ್ಗೆ ಹೇಳಿಲ್ಲ. ನರ್ಸ್‌ಗಳ ಕೊರತೆ ಇದೆ ಎಂದು ಹೇಳಿಲ್ಲ. ನಾನೇ ಆ ಸಂದರ್ಶನ ಸಮಿತಿಗೆ ಅಧ್ಯಕ್ಷನಾಗಿದ್ದೇನೆ. ನಾನು ಹೇಗೆ ಮುಖವನ್ನು ಉಳಿಸಿಕೊಂಡು ಅಲ್ಲಿಗೆ ಹೋಗುವುದು ಹೇಳಿ ನರ್ಸ್‌ಗಳನ್ನು ಕಳುಹಿಸಿಕೊಡಬೇಕು, ಡಾಕ್ಟರ್‌ಗಳನ್ನು ಕಳುಹಿಸಿಕೊಡಬೇಕು, ಔಷಧಿಗಳನ್ನು ಕಳುಹಿಸಿಕೊಡಬೇಕೆಂದು ಹೇಳಿದೆ, ಅದರ ಬಗ್ಗೆ ಹೇಳಿಲ್ಲ. ದಾರಿಯಲ್ಲಿ ಹಣ್ಣನ್ನು ಮಾರುವುದನ್ನು ನಿಲ್ಲಿಸಿದ್ದೇವೆಂದು ಹೇಳಿದರೂ ಇವತ್ತು ಹಣ್ಣನ್ನು ಮಾರಾಟ ಮಾಡುತ್ತಿದ್ದಾರೆ. ಹೋಟೆಲ್‌ಗಳನ್ನು ನಿಷೇಧ ಮಾಡಬೇಕು, ಮಾಡಲಿಲ್ಲ. ಮಾನ್ಯ ಅಧ್ಯಕ್ಷರಿಗೆ ಮಾಹಿತಿಯನ್ನು ಕೊಡುವುದಾದರೆ ಒಂದು ತಿಂಗಳಲ್ಲಿ 4 ಜನ ಸತ್ತರು, ನಾನು ಸಂದರ್ಶನ ಸಮಿತಿಯ ಅಧ್ಯಕ್ಷನಾಗಿ ಆಸ್ಪತ್ರೆಯಿಂದ ಡಾಕ್ಟರ್ ವರದಿಯನ್ನು ಕೊಟ್ಟರು; ನಗರಪಾಲಿಕೆಗೆ 21.2.1993ರಂದು ಒಂದು ಪತ್ರವನ್ನು ಬರೆದಿದ್ದು ಇನ್ನೂ ಕಾಲು ಮಾತಾವರಣ ಇದೆ ಇದರ ಬಗ್ಗೆ ತುರ್ತು ಮುನ್ನೆಚ್ಚರಿಕೆಯ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರೂ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಕಳೆದ ತಿಂಗಳು 18 ಜನ ಸತ್ತರು. ಈ ತಿಂಗಳು ನಿನ್ನೆಯ ರಾತ್ರಿ 7 ಗಂಟೆಯವರೆಗೆ ಮುಖ್ಯಮಂತ್ರಿಯವರಿಗೆ ಫೋನ್ ಮಾಡುವವರೆಗೆ 22 ಜನ ಸತ್ತಿದ್ದಾರೆ. ನಾವು ಯಾವ ಮುಖವನ್ನು